ನಾಣಯ್ಯ ಇನ್ನಷ್ಟು ವಿವರ ನೀಡಿದ. ಅಮೃತ್ತಿ ರಸ್ತೆಯಲ್ಲಿ ಸುಬ್ಬಯ್ಯನ ಮನೆ. ಆತ ಹಿಂದಿನ ದಿನವಷ್ಟೇ ಬೆಂಗಳೂರಿನಿಂದ ಬಂದಿದ್ದ. ವಾಸ್ತವವಾಗಿ ಆತ ಅಮೆರಿಕದಲ್ಲಿರುವ ತನ್ನ ಮಗನ ಮನೆಗೆ ಹೋಗಲೆಂದು ಬೆಂಗಳೂರಿನಲ್ಲಿ ಮಗಳ ಮನೆಯಲ್ಲಿದ್ದ. ಹೆಂಡತಿಗೆ ಹುಶಾರಿಲ್ಲ ಅಂತ ಕೊನೆ ಗಳಿಗೆಯಲ್ಲಿ ಪ್ರವಾಸ ರದ್ದು ಮಾಡಿ ಹಿಂದಿರುಗಿದ್ದ. ಅಲ್ಲೇ ಮನೆಯ ಸಮೀಪದ ಪಾರ್ಕಿನಲ್ಲಿ ಆತ ಹೆಚ್ಚಾಗಿ ಸಂಜೆ ವಾಯುವಿಹಾರಕ್ಕೆ ಹೋಗುವುದು ರೂಢಿ. ನಿನ್ನೆ ಮುಸ್ಸಂಜೆ ಹೊತ್ತಿಗೆ ಹಲ್ಲೆ ನಡೆಯಿತು. ಆದರೆ ಹಲ್ಲೆಕೋರರು ಹಣವನ್ನೇನೂ ಒಯ್ದಿಲ್ಲ. ಅವರಲ್ಲಿ ಬೆಲೆಬಾಳುವ ಮೊಬೈಲ್ ಇತ್ತು. ಅದನ್ನೂ ಕದ್ದಿಲ್ಲ.

"ಹಾಂ. ನಿಮ್ಮ ಅಂಗಡಿಗೆ ನುಗ್ಗಿದ ಕಳ್ಳರೇ ನಿಮ್ಮ ಮಾವನ ಮೇಲೆ ಹಲ್ಲೆ ಮಾಡಿದ್ದಾರೆ. ಹಾಗಿದ್ರೆ ಅವರು ಮಾಮೂಲಿ ಕಳ್ಳರಲ್ಲ. ದರೋಡೆಕೋರರೇ ಇರಬೇಕು. ಆ ಹೊತ್ತಿಗೆ ಅಲ್ಲಿಗೆ ಯಾರಾದರೂ ಬಂದಿದ್ದರಿಂದ ಹೆದರಿ ಕಾಲು ಕಿತ್ತಿರಬೇಕು. ಹಾಗಾಗಿ ಹಣ, ಮೊಬೈಲ್ ಕದ್ದಿಲ್ಲ ಅಂತ ಅನ್ನಿಸುತ್ತೆ. ಗಡಿಬಿಡಿಯಲ್ಲಿ ವಾಕಿಂಗ್ ಸ್ಟಿಕ್ ಬಿಟ್ಟಿದ್ದಾರೆ" ತರ್ಕ ಮಂಡಿಸಿದೆ.

"ಆ ಸಾಧ್ಯತೆ ಇಲ್ಲ. ಯಾಕೆಂದ್ರೆ ರಾತ್ರಿ ತಡವಾದರೂ, ಮಾವ ಯಾಕೆ ಬರಲಿಲ್ಲ ಅಂತ ನಮ್ಮತ್ತೆ ಪಾರ್ಕಿಗೆ ನೋಡಲಿಕ್ಕೆ ಹೋದಾಗಲಷ್ಟೇ ಅವರ ಮೇಲೆ ಹಲ್ಲೆಯಾಗಿದ್ದು ಗೊತ್ತಾಗಿದ್ದು. ಪಾರ್ಕ್‌ನಲ್ಲಿ ಮಾವ ಅಲ್ಲೇ ಕುಳಿತಿದ್ದರಂತೆ! ಬೇರೆ ಯಾರಾದರೂ ಅಲ್ಲಿದ್ದಿದ್ದರೆ, ಅವರು ಸುದ್ದಿ ತಿಳಿಸಬೇಕಿತ್ತಲ್ಲ. ಮಾವನಿಗೆ ಹೆಚ್ಚು ಪೆಟ್ಟೇನೂ ಆಗಿಲ್ಲ. ನಿಮ್ಗೆ ಆ ವಾಕಿಂಗ್ ಸ್ಟಿಕ್ಕಿನ ಮಾಲೀಕನ ಬಗ್ಗೆ ಗೊತ್ತಾಯಿತೆ?"

"ಖಚಿತವಾಗಿ ತಿಳಿದಿಲ್ಲ."

ಸುಬ್ಬಯ್ಯನ ವಿಳಾಸವನ್ನು ನೀಡಿ ನಾಣಯ್ಯ ಹೋದ. ಸಂಜೆ ಏಳರ ಆಸುಪಾಸು ನಾವು ತೆಲುಗರ ಬೀದಿಯತ್ತ ಹೊರಟೆವು.

ಮಾರಿಯಮ್ಮನ ದೇವಸ್ಥಾನದಿಂದ ತುಸುವೇ ದೂರದಲ್ಲಿತ್ತು ಪೂವಯ್ಯನ ಮನೆ. ಮನೆ ಸಾಕಷ್ಟು ಭವ್ಯವಾಗಿತ್ತು. ಕರೆಗಂಟೆ ಅದುಮಿದಾಗ, ವ್ಯಕ್ತಿಯೊಬ್ಬ ಕದ ತೆರೆದ.

"ಚಿಪ್ಪಿ ಪೂವಯ್ಯನವರು ಇದ್ದಾರೆಯೆ?" ನಾನು ಕೇಳಿದೆ.

"ತಾವು ಯಾರು?"

"ಪೊಲೀಸ್ ಇಲಾಖೆಯಿಂದ ಬರ್ತಾ ಇದ್ದೀವಿ." ಕರಮಚಂದ ಉತ್ತರಿಸಿದ.

ಅದನ್ನು ಕೇಳಿ ಆತನ ಮೊಗ ವಿವರ್ಣವಾಯಿತು. ಆತನ ತುಟಿಗಳು ಅದುರಿದವು.

"ನಿಮ್ಗೆ... ಯಾ... ಯಾರು ದೂರು ಕೊಟ್ಟಿದ್ದು?" ತಡವರಿಸುತ್ತಾ ಹೊರಬಿದ್ದವು ಶಬ್ದಗಳು.

"ಏನು ದೂರು?"

"ಪೂವಯ್ಯನವರು... ಕಾಣೆಯಾಗಿದ್ದಾರೆ ಅಂತ!" ಆತನ ದನಿ ಕಂಪಿಸಿತು.

ನಮಗೆ ಆಘಾತವಾಯಿತು.

"ಪೂವಯ್ಯ ಯಾವಾಗ ಕಾಣೆಯಾದರು?"

"ಇವತ್ತು ಸಂಜೆ. ನನ್ಗೆ ಹೋಟೆಲಿನಿಂದ ಊಟ ತರಲು ಹೇಳಿದ್ರು. ನಾನು ವಾಪಾಸು ಬರುವಾಗ ಅವರು ಮನೆಯಲ್ಲಿ ಇರಲಿಲ್ಲ. ಅವರ ಫೋನೂ ಸ್ವಿಚ್ ಆಫ್ ಆಗಿದೆ, ಸಾರ್! ನನ್ಗೆ ಏನು ಮಾಡಬೇಕೆಂದು ಗೊತ್ತಾಗ್ತಿಲ್ಲ."

"ನಿನ್ನ ಹೆಸರೇನು?"

ನಾವಿಬ್ಬರೂ ಮನೆಯೊಳಗೆ ಪ್ರವೇಶಿಸಿದೆವು.

"ನನ್ನ ಹೆಸರು ಚೆಂದಕ್ಕಿ. ಮೂರು ವರ್ಷದಿಂದ ಇಲ್ಲಿ ಕೆಲ್ಸ ಮಾಡ್ಕೊಂಡಿದ್ದೀನಿ."

"ಪೂವಯ್ಯನವರ ವಾಕಿಂಗ್ ಸ್ಟಿಕ್ ಇತ್ತೀಚೆಗೆ ಕಾಣೆಯಾಯ್ತೆ?" ಅನುಮಾನ ಹೊರಗೆ ಹಾಕಿದೆ.